# ಮೈಸೂರು ಮಹಾನಗರ ಪಾಲಿಕೆ

## ಪತ್ರಿಕಾ ಪ್ರಕಟಣೆ

ದಿನಾಂಕ : 18.07.2009

**ವಿಷಯ:** ನಾಗರೀಕ ತಾಂತ್ರಿಕ ಸಲಹಾ ಸಮಿತಿ ರಚನೆಯ ಬಗ್ಗೆ.

* * * *

ಮೈಸೂರು ಮಹಾನಗರ ಪಾಲಿಕೆಯು ನರ್ಮ್ ಯೋಜನೆಯಡಿಯಲ್ಲಿ ವಿವಿಧ ಯೋಜನೆಗಳು ಪ್ರಗತಿಯಲ್ಲಿದ್ದು, ಈ ಯೋಜನೆಗೆ ಸಹಕಾರಿಯಾಗುವಂತೆ ತಾಂತ್ರಿಕ ಸಲಹಾ ಸಮಿತಿಯನ್ನು ರಚಿಸುವ ಉದ್ದೇಶದಿಂದ ಮೈಸೂರು ನಗರದ ನಾಗರಿಕರಿಂದ ಸ್ವಯಂ ಸೇವಕರಾಗಿ, ಈ ಸಮಿತಿಗೆ, ಸಲಹೆ ಮತ್ತು ಸೂಚನೆಯನ್ನು ನೀಡಲು ಅರ್ಹ ವ್ಯಕ್ತಿಗಳಿಂದ ಹೆಸರನ್ನು ನೊಂದಾಯಿಸಲು ಕೋರಲಾಗಿದೆ.

**ಸಮಿತಿಯ ಉದ್ದೇಶಗಳು:**

- ಈ ಸಮಿತಿಯ ಮುಖಾಂತರ ಸ್ಥಳೀಯ ನಾಗರೀಕರು, ಚುನಾಯಿತ ಪ್ರತಿನಿಧಿಗಳು, ನಗರ ಸ್ಥಳೀಯ ಸಂಸ್ಥೆ ಹಾಗೂ ಯೋಜನಾ ಸಹಭಾಗಿದಾರರನ್ನು ಯೋಜನಾ ಕಾರ್ಯಕ್ರಮಗಳಿಗೆ ಪೂರ್ಣ ಪ್ರಮಾಣದಲ್ಲಿ ಭಾಗವಹಿಸಿ ನಿಗದಿತ ಸಮಯದಲ್ಲಿ ಮಾಹಿತಿಯನ್ನು ನೀಡಲು.
- ನಾಗರೀಕ ಹಾಗೂ ನಾಗರೀಕ ಸಮಿತಿ/ಮತಗಟ್ಟೆಯ ಸಮಿತಿ ಸಹಭಾಗ್ವಿತದೊಂದಿಗೆ ನರ್ಮ್ ಅಡಿಯಲ್ಲಿ ಎಲ್ಲಾ ಯೋಜನೆಗಳನ್ನು ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮುಖಾಂತರ ಸಲಹೆ ಮತ್ತು ಸೂಚನೆಯನ್ನು ನೀಡಿ ಸಹಕರಿಸಲು.
- ಈ ಸಮಿತಿಯ ಯಾವುದೇ ನಿರ್ಣಯವನ್ನು ಪಾಲಿಕೆಯ ಮಾಹಪೌರರು ಹಾಗೂ ಕೌನ್ಸಿಲ್ ಸಭೆಯ ಮುಂದೆ ಅನುಮೋದನೆ ಪಡೆಯಲಾಗುತ್ತದೆ.
- ಈ ಸಮಿತಿಯು ಪ್ರತಿ ತಿಂಗಳು ಸಭೆಗಳನ್ನು ನಡೆಸಿ ಸಲಹೆ, ಸೂಚನೆ ಹಾಗೂ ಮಾರ್ಗದರ್ಶನವನ್ನು ನೀಡುತ್ತದೆ. ಈ ಸಮಿತಿಯು ಸಭೆ ನಡೆಸಲು ಮೈಸೂರು ಮಹಾನಗರ ಪಾಲಿಕೆಯು ಸ್ಥಳ ನೀಡಿ ಸಹಕರಿಸುತ್ತದೆ.

ಮೇಲಿನ ಎಲ್ಲಾ ಉದ್ದೇಶದಿಂದ ಈ ಕೆಳಕಂಡ ಸಮಿತಿಯನ್ನು ರಚಿಸಲು ಉದ್ದೇಶಿಸಿದೆ.

a) ನಗರದ ಆಡಳಿತ ( Urban Governance )
b) ನಗರದ ಆರ್ಥಿಕ ಮತ್ತು ಕಾನೂನು ತಂಡ (Urban Finance and Legal group)
c)ನಗರದ ಬಡತನ (Urban Poverty)
e) ನಗರದ ಮೂಲಭೂತ ಸೌಕರ್ಯ ಮತ್ತು ತಾಂತ್ರಿಕತೆ (Urban Infrastructure and Engineering)

ಈ ಒಂದು ಸಮಿತಿಗೆ ಸದಸ್ಯತ್ವ ಬಯಸುವುವರು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟಿರುತ್ತಾರೆ.

1. ನಾಗರೀಕ ಸಮಿತಿಯ ಸದಸ್ಯರಾಗಿರಬೇಕು.
2. ಸಂಬಂಧ ಪಟ್ಟ ವಿಷಯದಲ್ಲಿ ಸ್ನಾತಕೋತ್ತರ ಪದವಿ ಅಥವಾ ಪಿ.ಹೆಚ್.ಡಿ. ಪದವಿಯನ್ನು ಹೊಂದಿರಬೇಕು ಅಥವಾ ಸಂಬಂಧ ಪಟ್ಟ ಕ್ಷೇತ್ರದಲ್ಲಿ 10 ವರ್ಷಗಳ ಅನುಭವ ಹೊಂದಿರಬೇಕು.
3. ನಾಗರೀಕ ಸಮಿತಿಯ ಸದಸ್ಯರಲ್ಲದವರು ಸಹ ನೊಂದಾಯಿಸಕೊಳ್ಳಬಹುದು ಆದರೆ ಕೌನ್ಸಿಲ್ ಸಭೆಯ ಅನುಮೋದನೆ ಪಡೆದು ಆಯ್ಕೆಮಾಡಿಕೊಳ್ಳಲಾಗುತ್ತದೆ.
4. ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು/ತಾಂತ್ರಿಕ ಸಂಘ ಸಂಸ್ಥೆಗಳು ಸಹ ಹೆಸರನ್ನು ನೊಂದಾಯಿಸಿಕೊಳ್ಳಬಹುದು (ನಿಬಂಧನೆಗೆ ಒಳ ಪಟ್ಟಿರುತ್ತದೆ).
5. ಒಟ್ಟು 30 ಜನ ಸದಸ್ಯರನ್ನು ತಾಂತ್ರಿಕ ಸಲಹಾ ಸಮಿತಿಗೆ ಕೌನ್ಸಿಲ್ ಸಭೆಯ ಅನುಮೋದನೆ ಪಡೆದು ಆಯ್ಕೆಮಾಡಿಕೊಳ್ಳಲಾಗುತ್ತದೆ.
6. ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು mysorecity.gov.in ನಲ್ಲಿ ಲಭ್ಯವಿದೆ.

ಈ ಕೆಳಕಂಡ ವಿಳಾಸದಲ್ಲಿ ತಮ್ಮ ಹೆಸರನ್ನು 31ನೇ ಜುಲೈ 2009ರೊಳಗೆ ನೊಂದಾಯಿಸಲು ಕೋರಲಾಗಿದೆ :

- ತಮ್ಮ ಹತ್ತಿರದ ವಲಯ ಕಛೇರಿಯಲ್ಲಿ.
- ಮೈಸೂರು ಮಹಾನಗರ ಪಾಲಿಕೆಯ ನರ್ಮ್ ಯೋಜನೆಯ ಕಛೇರಿಯಲ್ಲಿ.
- ಅಂತರ್ಜಾಲ ಮುಖಾಂತರ sdojnnurm@gmail.com

ಸಹಿ/–
ಆಯುಕ್ತರು,
ಮೈಸೂರು ಮಹಾನಗರ ಪಾಲಿಕೆ,
ಮೈಸೂರು.

ಗೆ,

ಸಂಪಾದಕರು,

------------

------------

------------

**ಪ್ರತಿಯನ್ನು :**

1. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ನರ್ಮ್ ವಿಶೇಷಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ರವರ ಮಾಹಿತಿಗಾಗಿ.
2. ಅಧೀಕ್ಷಕ ಅಭಿಯಂತರರು, ಮೈಸೂರು ಮಹಾನಗರ ಪಾಲಿಕೆ, ಮೈಸೂರು ರವರ ಮಾಹಿತಿಗಾಗಿ.
3. ವಲಯ ಸಹಾಯಕ ಆಯುಕ್ತರುಗಳಿಗೆ ಮಾಹಿತಿಗಾಗಿ.